ನಾಲ್ವರೊಡನೆ ಕೃಷ್ಣಾಜಿ ಕುಳಿತಿದ್ದ. ಗುಳಿ ಬಿದ್ದ ಕೆನ್ನೆಗಳು, ಸುಕ್ಕಾದ ಮುಖ, ಖಾಲಿ ಸೈಟಾದ ತಲೆ... ಕಣ್ಣುಗಳಲ್ಲಿ ಮಾತ್ರ ಅದೇ ಚಪಲ, ಚಂಚಲ ನೋಟ. ಇಸ್ಪೀಟೆಲೆಗಳನ್ನು ಕೈಯಲ್ಲಿ ಹಿಡಿದುಕೊಂಡು ಅದರಿಂದಲೇ ಗಾಳಿ ಬೀಸಿಕೊಳ್ಳುತ್ತಿದ್ದ. "ಎಷ್ಟ ವರ್ಷದ ಮ್ಯಾಲೆ ಹೆಂಡ್ತಿ ನೆನಪಾಗೇದಲಾ... ಮುಂಬೈವಳಗ ಮನಿ ಮಾಡಿಯೋ... ಏನ ಖೋಲೀನೊ?" ಎಂದೊಬ್ಬ ಕೇಳಿದ. "ಕರಕೊಂಡು ಹೋದ ಮ್ಯಾಲೆ ಎಲ್ಲಾ ಮಾಡೋದಪಾ..." ಎನ್ನುತ್ತ ದೇಶಾವರಿ ನಗೆ ಬೀರಿದ ಕೃಷ್ಣಾಜಿ. ಎದುರಿನವ ಸಿಗರೇಟು ಹಚ್ಚಿ ಕೊಟ್ಟು, "ಇಕಿ ನಿನ್ನ ಹೆಂಡ್ತಿಪಾ. ಕಾಯಮ ಇಟಗೋಬೇಕು. ಉಳಕಿದಾವ್ರಗತೆ ಕೈಕೊಟ್ಟು ಓಡಂಗಿಲ್ಲ. ಈಗಾಗಳೆ ಒಂದು ಸರತೆ ಬಿಟ್ಟು ಹೋಗೇದಿ" ಎಂದು ನಗುತ್ತ ಹೇಳಿದ. ಕೃಷ್ಣಾಜಿ ಸುರುಳಿ ಸುರುಳಿಯಾಗಿ ಹೊಗೆ ಬಿಡುತ್ತಾ, "ಏನ ಮಾಡೋದಪಾ. ಎಷ್ಟು ದಿವಸ ಯೋಗ ಇರ್ತದೋ ಅಷ್ಟು ದಿವಸ ಇರ್ತಾರ" ಎಂದು ಕಣ್ಣು ಮಿಟುಕಿಸಿ ನಕ್ಕ. ಮತ್ತೊಬ್ಬ, "ಹ್ಞೂಂ... ಈಗ ದೇಶಪಾಂಡೆಯವರ ಮನ್ಯಾಗ ಕೇಳಾವರೂ ಯಾರಿಲ್ಲ. ಇಷ್ಟು ದಿವಸ ಇದ್ದರಂತ ಇವ ಕಾಲು ಹಾಕಿಲ್ಲ. ಎಲ್ಲಾರೂ ಹೋದ್ರಂತ ಗೊತ್ತಾದ ಮ್ಯಾಲ ವಾಸನಿ ಹಿಡಕೊಂಡು ಮೂಸಗೋತ ಬಂದಾನ" ಎಂದು ಗೊಳ್ಳನೆ ನಕ್ಕ. ಆ ನಗು ಎಲ್ಲರಲ್ಲೂ ಪ್ರತಿಧ್ವನಿಸಿತು. ಹಿಂದೆಯೇ ಸಾರಾಯಿಯೂ ಬಂದಿರಬೇಕು. ಖಾಲಿ ಗ್ಲಾಸುಗಳು, ಕುರುಕಲಿನೊಂದಿಗೆ ವಾಸನೆಯೂ ಮುತ್ತಿಕೊಂಡಿತು. ತಾಳಲಾರದೇ ಕೆಳಗಿಳಿದೆ.

ಮಂಚಿಯ ಕೈ ಹಿಡಿದು, "ಬದ್ಲಾಗೋದಿರ್ಲಿ... ಎಲ್ಲಾ ಕೆಟ್ಟ ಚಟಾ ಕಲಕೊಂಡಾನ. ಯಾವ ನಂಬಿಕಿ ಮ್ಯಾಲೆ ನಾ ಇವನ ಜೋಡಿ ಮುಂಬೈಕ್ಕ ಹೋಗಲಿ?" ಎಂದು ಬಿಕ್ಕಿದೆ. ಅಷ್ಟರಲ್ಲೇ ವಾದಿರಾಜ... ವಾಜಣ್ಣ ಬಂದಿದ್ದ. "ರುಕ್ಕೂ... ಮನಶಾ ಭಾಳ ಹೊಲಸಿದ್ದಾನವಾ. ಅವನ ಜೋಡಿ ಹೋಗಬ್ಯಾಡಾ. ನಮ್ಮ ನಾರಾಯಣ ಇದ್ದರ ಇವನ ಕಪಾಳಕ್ಕ ಬಾರಿಸಿ ಕಳಸ್ತಿದ್ದಾ. ಈಗ ಕೇಶವ ಹೇಂಡ್ತಿ ಕೈಗೊಂಬಿ ಆಗ್ಯಾನ. ಅಕಿ ಆಡಿದ್ದ ಆಟ. 'ಇದು ನನ್ನ ತವರಮನಿ. ನನ್ನ ಹಕ್ಕದ. ನಾ ಇಲ್ಲೇ ಇರಾಕಿ' ಅನ್ನು. ಹಂಗೂ ಅಕಿ ತ್ರಾಸುಕೊಟ್ಟರ ಬೆಳಗಾವ್ಯಾಗ ಎಲ್ಲರೆ ನೌಕರಿ ಕೊಡಸ್ತೇನಿ" ಎಂದ. ಏನು ಮಾಡಲಿ? ಭವಿಷ್ಯವೆಲ್ಲ ಅಯೋಮಯವಾದಂತೆ... ಏನೂ ತಿಳಿಯದಂತಾಯಿತು. ಕೈಮುಗಿದು ಅಳುತ್ತಲೇ ಹೊರಗೋಡಿ ಬಂದೆ. ಹಿಂದೆಯೇ ಬಂದ ಮಂಚಿ, "ನೀ ಅವನ ಜೋಡಿ ಹೋದ್ಯಂದ್ರ ನೋಡು. ನಿನಗ ನಿನ್ನ ರಾಯರ ಆಣೆ" ಎಂದವಳೇ ಬಿರುಗಣ್ಣು ಬಿಟ್ಟು ಓಡಿಹೋದಳು. ನಾನೇನು ಮಾಡಲಿ? ಹೋಗದಿದ್ದರೆ ನನಗೆ ಉಳಿಗಾಲವಿಲ್ಲ. ಶ್ರೀವತ್ಸನಿಗೆ ಫೋನ್ ಮಾಡಿ ವಿಷಯ ತಿಳಿಸಿದರೆ ರಮಾವ್ವನಿ ಬೆಂಗಳೂರಿಗೇ ಬರಲು ಹೇಳುತ್ತಾರೆ. ಆದರೆ ಶ್ರೀವತ್ಸ, ಅವನ ಹೆಂಡತಿ... ಮತ್ತೆ ಪ್ರಶ್ನಾರ್ಥಕ ಚಿಹ್ನೆಯೇ. ಇಲ್ಲವಾದರೆ ವಾಜಣ್ಣ ಹೇಳಿದಂತೆ ಬೆಳಗಾವಿಯಲ್ಲಿ ನೌಕರಿ ಅಥವಾ ಮಠದ ಆಚಾರ್ಯರು ಹೇಳಿದಂತೆ ಮಠದಲ್ಲಿ ಸೇವೆ ಮಾಡುತ್ತ ಇದ್ದುಬಿಡುವುದು... ಎಲ್ಲ ಅಷ್ಟು ಸರಳವಲ್ಲ ಎಂಬೆಲ್ಲ ಯೋಚನೆಗಳೊಡನೆ ದುಗುಡದಿಂದಲೇ ಮನೆಯೊಳಗೆ ಕಾಲಿಟ್ಟಿದ್ದೆ. ಎಂದೂ ಇಲ್ಲದೇ ಅಂದು ತಾವೇ ಬೇಗ ಅಡಿಗೆ ಮಾಡಿದ್ದರು ರಾಧಾವ್ವನಿ. ಒತ್ತಾಯಪೂರ್ವಕವಾಗಿ ಬಡಿಸಿದರು. ಉಂಡು ಎಂಟು ಗಂಟೆಗೆಲ್ಲ ಮಲಗಿದವಳಿಗೆ ಈ ಕಥೆ. ಅವ್ವ, ಅಪ್ಪ, ಅಣ್ಣ, ಶಂಕರ... ಎಲ್ಲ ನೆನಪಾಗುತ್ತಿದ್ದಾರೆ. ಮತ್ತೆ ರೆಪ್ಪೆಗಳು ಸೇರದಂತೆ ಪ್ರವಾಹ ಹರಿಯುತ್ತಿದೆ ಧಾರೆ ಧಾರೆಯಾಗಿ.

ಅಲ್ಪ ಸ್ವಲ್ಪ ಜೋಂಪು ಹತ್ತಿ ನಸುಕಿನಲ್ಲೇ ಎಚ್ಚರವಾಯಿತು. ಅಚ್ಚರಿಯೆಂಬಂತೆ ರಾಧಾವ್ವನಿ ಅಂದು ಬೇಗ ಎದ್ದು ಕೆಲಸ ಮಾಡುತ್ತಿದ್ದರು. ಎಂದಿನಂತೆ ಸ್ನಾನ ಮುಗಿಸಿ ನೀರು ತರಲು ಕೊಡ ಹಿಡಿದು ಹೊರಟೆ. "ಲಗೂ ಬಂದುಬಿಡು. ಅವರು ಎಷ್ಟೊತ್ತಿಗೆ ಬರ್ತಾರೋ ಏನೋ? ಛೊಲೊ ಸೀರಿ ಉಟಗೊಂಡು ಕೂಡು" ಎಂದರು. ತಲೆಯಾಡಿಸಿದೆ. ಮನಸ್ಸು ದೊಡ್ಡ ಆಘಾತಕ್ಕೊಳಗಾಗಿ ಶಾಂತವಾಗಿತ್ತು. ದೇವರು ಮಾಡಿಸಿದಂತಾಗಲಿ ಎಂಬ ಭಾವ. ನಿತ್ಯ ನೀರು ತುಂಬುತ್ತಿದ್ದ ಕೃಷ್ಣೆಯ ತೀರವನ್ನೊಮ್ಮೆ ನಿರುಕಿಸಿ ನೋಡಿ ಕೊನೆಯ ಬಾರಿ ಎಂಬಂತೆ ಕಣ್ತುಂಬಿಕೊಂಡೆ. ಒಂದು ಕ್ಷಣ